# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 358 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅ.ದೇವೇಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 07.07.2023 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2023-24ನೇ ಸಾಲಿಗೆ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಇಲಾಖೆ ವ್ಯಾಪ್ತಿಗೆ ಬರುವ ಮೆಟ್ರಿಕ್ ನಂತರದ ಹಾಗೂ ಮೆಟ್ರಿಕ್ ಪೂರ್ವ ಬಾಲಕರ/ ಬಾಲಕಿಯರ ವಸತಿ ಶಾಲೆಗಳಲ್ಲಿ ದಾಖಲಾಗಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;(ಜಿಲ್ಲಾವಾರು ಮಾಹಿತಿ ಒದಗಿಸುವುದು) | ಹಿಂದುಳಿದ ವರ್ಗಗಳ ಇಲಾಖೆಯಡಿ ಒಟ್ಟು 2442 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಒಟ್ಟು ಮಂಜೂರಾತಿ ಸಂಖ್ಯೆ 2,28,286 ಇರುತ್ತದೆ. ಪ್ರಸ್ತುತ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ 2023-24ನೇ ಸಾಲಿನ ಪ್ರವೇಶ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಈವರೆಗೂ (ಜುಲೈ 2023) ಸ್ವೀಕೃತವಾದ ಜಿಲ್ಲಾವಾರು ಅರ್ಜಿಗಳ ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ರಾಜ್ಯದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಸತಿ ಶಾಲೆಗಳಲ್ಲಿ ಖಾಲಿ ಇರುವ ವಾರ್ಡನ್‌ಗಳ ಒಟ್ಟು ಸಂಖ್ಯೆ ಎಷ್ಟು; ಖಾಲಿ ಇರುವ ವಾರ್ಡನ್‌ಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಕೈಗೊಳ್ಳದಿದ್ದಲ್ಲಿ ಕಾರಣವೇನು ? | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒಟ್ಟು 2438 ನಿಲಯ ಮೇಲ್ವಿಚಾರಕರ ಹುದ್ದೆಗಳು ಮತ್ತು 307 ಕಿರಿಯ ನಿಲಯ ಮೇಲ್ವಿಚಾರಕರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 1160 ನಿಲಯ ಮೇಲ್ವಿಚಾರಕರ ಮತ್ತು 300 ಕಿರಿಯ ನಿಲಯ ಮೇಲ್ವಿಚಾರಕರ ಹುದ್ದೆಗಳು ಭರ್ತಿಯಾಗಿದ್ದು, 1278 ನಿಲಯ ಮೇಲ್ವಿಚಾರಕರ ಹುದ್ದೆಗಳು ಖಾಲಿ ಇರುತ್ತವೆ.<br><br>2017 ರಲ್ಲಿ 1028 ನಿಲಯ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಪೈಕಿ 440 ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗಿರುತ್ತದೆ. ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದಿಂದ(ಕೆ.ಪಿ.ಎಸ್.ಸಿ) 392 ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಅಕ್ಟೋಬರ್ 2021 ಹಾಗೂ ಫೆಬ್ರುವರಿ 2022ರಲ್ಲಿ ನೀಡಿದ್ದು, 202 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿರುತ್ತದೆ. ಬಾಕಿ ಉಳಿದಿರುವ 221 ನಿಲಯ ಮೇಲ್ವಿಚಾರಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಕಳುಹಿಸಲು ಕೆ.ಪಿ.ಎಸ್.ಸಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅಂತಿಮ ಪಟ್ಟಿ ನಿರೀಕ್ಷಿಸಲಾಗಿದೆ. |

**ಸಂಖ್ಯೆ: ಹಿಂವಕ 319 ಬಿಎಂಎಸ್ 2023**

**(ಶಿವರಾಜ ಎಸ್ ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

## ಅನುಬಂಧ

**ಜುಲೈ 2023 ರ ವರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ಸ್ವೀಕೃತವಾದ ಅರ್ಜಿಗಳ ವಿವರ.**

| ಕ್ರ.ಸಂ | ಜಿಲ್ಲೆಯ ಹೆಸರು | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ |
|---|---|---|---|
| 1 | ಬಾಗಲಕೋಟೆ | 5792 | 2042 |
| 2 | ಬಳ್ಳಾರಿ | 1160 | 889 |
| 3 | ಬೆಳಗಾವಿ | 5994 | 4337 |
| 4 | ಬೆಂಗಳೂರು(ಗ್ರಾ) | 130 | 379 |
| 5 | ಬೆಂಗಳೂರು ನಗರ | 363 | 69 |
| 6 | ಬೀದರ್ | 640 | 736 |
| 7 | ಚಾಮರಾಜನಗರ | 336 | 448 |
| 8 | ಚಿಕ್ಕಬಳ್ಳಾಪುರ | 886 | 649 |
| 9 | ಚಿಕ್ಕಮಗಳೂರು | 1140 | 1153 |
| 10 | ಚಿತ್ರದುರ್ಗ | 1311 | 1040 |
| 11 | ದಕ್ಷಿಣ ಕನ್ನಡ | 799 | 513 |
| 12 | ದಾವಣಗೆರೆ | 1196 | 869 |
| 13 | ಧಾರವಾಡ | 1681 | 786 |
| 14 | ಗದಗ | 1732 | 1404 |
| 15 | ಹಾಸನ | 1484 | 1181 |
| 16 | ಹಾವೇರಿ | 1792 | 1940 |
| 17 | ಕಲಬುರುಗಿ | 2419 | 1885 |
| 18 | ಕೊಡಗು | 195 | 208 |
| 19 | ಕೋಲಾರ | 387 | 550 |
| 20 | ಕೊಪ್ಪಳ | 2479 | 2804 |
| 21 | ಮಂಡ್ಯ | 964 | 1247 |
| 22 | ಮೈಸೂರು | 1040 | 741 |
| 23 | ರಾಯಚೂರು | 1937 | 1363 |
| 24 | ರಾಮನಗರ | 408 | 510 |
| 25 | ಶಿವಮೊಗ್ಗ | 2033 | 2293 |
| 26 | ತುಮಕೂರು | 2411 | 1743 |
| 27 | ಉಡುಪಿ | 563 | 531 |
| 28 | ಉತ್ತರ ಕನ್ನಡ | 1116 | 2286 |
| 29 | ವಿಜಯನಗರ | 1502 | 1274 |
| 30 | ವಿಜಯಪುರ | 3491 | 2435 |
| 31 | ಯಾದಗಿರಿ | 1785 | 1220 |